ರಾಜ್ಯದಲ್ಲಿ ವಕ್ಫ್ ಇಲಾಖೆಯಿಂದ ಶಿಷ್ಯವೇತನ ನೀಡುವುದು.

2215(2742) ಶ್ರೀ ಹೊನ್ನಳ್ಳಿ ಜಬ್ಬಾರ ಖಾನ್ ಸೈಯದ್ ಖಾನ್ (ಹುಬ್ಬಳ್ಳಿ) :— ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ 2000-2001 ಹಾಗೂ 2001-2002ನೇ ಸಾಲಿನಲ್ಲಿ ಎಂ.ಬಿ.ಬಿ.ಎಸ್. ಬಿಇ, ಡಿಪ್ಲೋಮಾ ಹಾಗೂ ಇನ್ನಿತರೇ ಹೆಚ್ಚಿನ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರು ವಕ್ಫ್ ಇಲಾಖೆಯಿಂದ ಶಿಷ್ಯವೇತನ ಪಡೆಯಲು ಸಲ್ಲಿಸಿದ ಅರ್ಜಿಗಳೆಷ್ಟು?

ಆ) ಶಿಷ್ಯ ವೇತನ ಪಡೆದ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು? ಉಳಿದ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು?

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು) :—

ಅ) 1) ಕರ್ನಾಟಕ ರಾಜ್ಯ ವಕ್ಫ್ ಮಂಡಳಿ (ವಿದ್ಯಾರ್ಥಿಗಳಿಗೆ)

ಈ ಎರಡು ವರ್ಷಗಳಲ್ಲಿ ವಕ್ಫ್ ಮಂಡಳಿಯಿಂದ ಅರ್ಜಿಗಳನ್ನು ಆಹ್ವಾನಿಸಿರುವುದಿಲ್ಲ. ಹಾಗಿದ್ದರೂ, ಹಿಂದಿನ ವರ್ಷಗಳಲ್ಲಿ ಮಂಜೂರು ಮಾಡಿದಂತಹ ಶಿಷ್ಯವೇತನವನ್ನು ಹಂತ ಹಂತಗಳಲ್ಲಿ ನೀಡಲಾಗುತ್ತಿದೆ.

2) ಕರ್ನಾಟಕ ರಾಜ್ಯ ವಕ್ಫ್ ಪ್ರತಿಷ್ಠಾನ ಮತ್ತು ಮಹಿಳೆಯರ ಅಭಿವೃದ್ಧಿ (ವಿದ್ಯಾರ್ಥಿನಿಯರಿಗೆ)

2000-2001 : ಒಟ್ಟು ಸ್ವೀಕೃತ 24,479

2001-2002 : ಅರ್ಜಿಗಳನ್ನು ಆಹ್ವಾನಿಸಿರುವುದಿಲ್ಲ

ವಕ್ಫ್ ಮಂಡಳಿ (ವಿದ್ಯಾರ್ಥಿಗಳಿಗೆ ಮಾತ್ರ)

1) ಈ ಎರಡು ವರ್ಷಗಳ ಹಿಂದೆ ಸ್ವೀಕೃತವಾಗಿದ್ದ ಅರ್ಜಿಗಳ ಪೈಕಿ 2000-01 ರಲ್ಲಿ 88 ವಿದ್ಯಾರ್ಥಿಗಳಿಗೆ ಹಾಗೂ 2001-02ರಲ್ಲಿ ಇದುವರೆವಿಗೂ 50 ವಿದ್ಯಾರ್ಥಿಗಳಿಗೆ ಶಿಷ್ಯ ವೇತನವನ್ನು ನೀಡಲಾಗಿದೆ.

ಕೊಡಬೇಕಾಗಿರುವ ವಿದ್ಯಾರ್ಥಿಗಳ ಸಂಖ್ಯೆ: 124

2) ಕರ್ನಾಟಕ ರಾಜ್ಯ ವಕ್ಫ್ ಪ್ರತಿಷ್ಠಾನ ಮತ್ತು ಮಹಿಳೆಯರ ಅಭಿವೃದ್ಧಿ ಮತಿಯಿಂದ 2000-2001ರಲ್ಲಿ ಸ್ವೀಕರಿಸಿದ ಅರ್ಜಿಗಳು ಪರಿಶೀಲನೆ ಹಂತದಲ್ಲಿದೆ.